ದಿನಾಂಕ 10-12-2019 ಅಸಲು ದಾವಾ ಸಂ.130/2011

ಡಿ.ಡಬ್ಲ್ಯೂ.-1

ಸಾಕ್ಷಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. ಎಸ್ ಎ ಎಸ್ ವಕೀಲರಿಂದ

ನನ್ನ ಸ್ವಂತ ಊರು ಬದಾಮಿ ತಾಲೂಕಿನ ಇನಾಮಹುಲ್ಲಿಕೇರಿ ಇರುತ್ತದೆ. ನಾನು ಸಸಾಲಟ್ಟಿ ಗ್ರಾಮಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ 2017 ರಿಂದ ಜೂನ್-2019 ರವರೆಗೆ ಕಾರ್ಯನಿರ್ವಹಿಸಿರುತ್ತೇನೆ. ಈ ದಾವೆ 2011 ರಲ್ಲಿ ದಾಖಲಾಗಿದೆ. 2011 ರಲ್ಲಿ ನಾನು ಸದರಿ ಗ್ರಾಮಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ ಆದ್ದರಿಂದ ಸದರಿ ದಾವೆಯ ಘಟನೆಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. 2011 ರಲ್ಲಿ ಸಸಾಲಟ್ಟಿ ಗ್ರಾಮಪಂಚಾಯತಿಯಲ್ಲಿ ಪಿ.ಪಿ.ರಾವಳ ಎಂಬ ಪಿಡಿಓ ಇದ್ದು, ರಂಗಪ್ಪಗೋಳ ಇವರು ಕಾರ್ಯದರ್ಶಿಯಾಗಿದ್ದರು. ಅವರುಗಳು ಪ್ರಸ್ತುತ ಕ್ರಮವಾಗಿ ಹನಗಂಡಿ ಮತ್ತು ಹಳಿಂಗಳಿ ಗ್ರಾಮಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ದಾವೆಯಲ್ಲಿ ತಕರಾರನ್ನು ಸಹ ಅವರೇ ಸಲ್ಲಿಸಿರುತ್ತಾರೆಂದರೆ ಸರಿ. ಹನಗಂಡಿ ಮತ್ತು ಹಳಿಂಗಳಿ ಗ್ರಾಮಗಳು ಸಸಾಲಟ್ಟಿಗಿಂತ ನ್ಯಾಯಾಲಯಕ್ಕೆ ಸಮೀಪದ ಗ್ರಾಮಗಳು ಎಂದರೆ ಸರಿ. ಪ್ರಸ್ತುತ ನಾನು ಸಸಾಲಟ್ಟಿ ಗ್ರಾಮಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎಂದರೆ ಸರಿ. ಪ್ರಸ್ತುತ ಸಸಾಲಟ್ಟಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಹುದ್ದೆ ಖಾಲಿ ಇದ್ದು, ಪ್ರಭಾರಿಯಾಗಿ ಪಿ ಡಿ ಓ ರಾಜು ಮುಗಳಖೋಡ ಇವರು ಇರುತ್ತಾರೆ. ಪಿ.ಪಿ.ರಾವಳ ಎಂಬ ಪಿಡಿಓ ಮತ್ತು ರಂಗಪ್ಪಗೋಳ ಎಂಬ ಕಾರ್ಯದರ್ಶಿ ಇವರು ಬಂದು ಸಾಕ್ಷಿ ಹೇಳಿದರೆ ಸತ್ಯ ಸಂಗತಿ ಹೊರಬೀಳುತ್ತದೆ ಎಂಬ ಉದ್ದೇಶದಿಂದ ಅವರನ್ನು ಮರೆಮಾಚಿ ನನಗೆ ಸಾಕ್ಷಿ ಹೇಳುವ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಸಹ ನಾನು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಿ.ಪಿ.ರಾವಳ, ರಂಗಪ್ಪಗೋಳ ಮತ್ತು ರಾಜು ಮುಗಳಖೋಡ ಇವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಸಮರ್ಥರಿರುತ್ತಾರೆಂದರೆ ಸರಿ.

ಮುಂದುವರೆದ ಪಾಟೀಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ಬನಹಟ್ಟಿ.